

ಶನಿವಾರವಾಡದ ಹೊರನೋಟ



ದೆಹಲಿ ದರ್ವಾಜಾ



ಕೋಟೆಯ ಮೇಲೆ ನಡೆದಾಡಲು ಇರುವ ದಾರಿ

ಕೋಟೆಯ ಆವಾರದಲ್ಲಿರುವ ಸುಂದರ ಉದ್ಯಾನ





ಹಜಾರೆ ಕಾರಂಜಿ

ಮುಖ್ಯದ್ವಾರದ ಮೇಲ್ಮಹಡಿಗೆ ಹೋಗಬಹುದು. ಇದು ವಿಶಾಲವಾದ ಬಾಲ್ಕನಿಯಾಗಿದ್ದು ಇಲ್ಲಿಂದ ಕೋಟೆಯ ಒಳಗಡೆ ಮತ್ತು ಹೊರಗಡೆ ಎರಡನ್ನೂ ಕುಳಿತು ವೀಕ್ಷಿಸಬಹುದು. ಇದಕ್ಕೆ ಕಲ್ಲಿನ ಹಾಸಿಗೆ ಹಾಗೂ ಮರದ ಮೇಲ್ಹಾವಣಿಯಿದೆ. ಮರದಿಂದ ಮಾಡಿದ ಜಂತಿಗಳು ಯಾವುದೇ ಹೊಸ ವಿನ್ಯಾಸಕ್ಕೆ ಕಡಿಮೆಯಿಲ್ಲ. ಮರದ ಕಂಬಗಳನ್ನು ಇಲ್ಲಿ ಆಕರ್ಷಕವಾಗಿ ಕೆತ್ತಲಾಗಿದೆ.

ಕೋಟೆಯ ಗೋಡೆಯ ಮೇಲೆ ನಡೆದುಕೊಂಡು ಹೋಗಲು ದಾರಿಯಿದೆ. ಸುಮಾರು 4–5 ಅಡಿ ಅಗಲದ ದಾರಿಯಲ್ಲಿ ನಡೆಯುತ್ತಾ ಹೋದಂತೆ ಚೀನಾದ ಗೋಡೆಯ ಮೇಲೆ ನಡೆದ ಅನುಭವ. ಕಾಲುದಾರಿಯಲ್ಲಿ ಕೋಟೆಯ ಮೇಲೆ ಒಂದು ಸುತ್ತು ಹಾಕಬಹುದು. ಅಲ್ಲಲ್ಲಿ ಕಾವಲು ಗೋಪುರಗಳಿವೆ. ಮೇಲಿನಿಂದ ಕೋಟೆಯ ಒಳಗೆ ಇಳಿಯಲು ಮತ್ತು ಹೊರಗೆ ಹೋಗಲು ಕಿರಿದಾದ ಮೆಟ್ಟಿಲುಗಳಿವೆ. ಕೋಟೆಗೆ ಒಟ್ಟು 5 ಬಾಗಿಲುಗಳಿದ್ದು, ಅವುಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಆ ಹೆಸರುಗಳೆಂದರೆ: ಡೆಲ್ಲಿ ದರ್ವಾಜಾ, ಮಸ್ತಾನಿ ದರ್ವಾಜಾ, ಕಿಡಕಿ ದರ್ವಾಜಾ, ಗಣೇಶ ದರ್ವಾಜಾ ಮತ್ತು ನಾರಾಯಣ ದರ್ವಾಜಾ.

ಕೋಟೆಯ ಮೇಲಿಂದ ಒಂದು ಸುತ್ತು ಹಾಕಿದವನು ಕೆಳಗಿಳಿದು ಮಧ್ಯದ ಆವರಣಕ್ಕೆ ಬಂದೆ. ಒಂದು ಕಾಲದಲ್ಲಿ 1000 ಜನ ವಾಸವಾಗಿದ್ದ ಜಾಗ ಈಗ ಪಳೆಯುಳಿಕೆಯಾಗಿದೆ. ಅಲ್ಲಲ್ಲಿ ಕಾಣುವ ಹಳೆಯ ಕಟ್ಟಡಗಳ ಆಯ ಗತವೈಭವದ ಕತೆ ಹೇಳುತಿತ್ತು. 'ಹಜಾರೆ ಕಾರಂಜಿ' (ಸಾವಿರ ಕಾರಂಜಿ) ಅಲ್ಲಿಯ ಆಕರ್ಷಣೆಗಳಲ್ಲಿ ಒಂದು. ಅದನ್ನು ಹದಿನಾರು ಎಸಳಿರುವ ಕಮಲದ ಆಕಾರದಲ್ಲಿ ಕಟ್ಟಲಾಗಿದೆ. ಒಂದೊಂದು ಎಸಳುಗಳಿಗೆ ಹದಿನಾರು ಕಾರಂಜಿಯ ಜೆಟ್‌ಗಳಿವೆ ಮತ್ತು ಅವು 80 ಅಡಿಯ ಪರಿಧಿಯಲ್ಲಿ ಹಾರುತ್ತವೆ. ಆ ಕಾಲದಲ್ಲಿ ಇದು ಅತೀ ವಿಶಿಷ್ಟವಾದ ತಂತ್ರಜ್ಞಾನದಿಂದ ಕೂಡಿದ್ದ ಕಾರಂಜಿಯಾಗಿತ್ತು.

## ಕೆಟ್ಟ ನಿರ್ವಹಣೆ

ನಡೆದಾಡುವಾಗ ಅಲ್ಲಲ್ಲಿ ಬಿದ್ದಿದ್ದ ಪೇಪರ್ ಕಪ್‌ಗಳು, ನೀರಿನ ಬಾಟಲಿಗಳು, ತಿಂದು ಎಸೆದ ಕಾಗದದ ಪ್ಲೇಟ್‌ಗಳು ಸುಂದರ ಇತಿಹಾಸಕ್ಕೆ ವರ್ತಮಾನವು ಒದಗಿಸಿದ ದುರ್ದೆಸೆಯ ಗುರುತುಗಳಂತೆ ಕಾಣಿಸಿದವು; ಇತಿಹಾಸದ ಕುರಿತು ನಮಗಿರುವ ಉಡಾಫೆಯನ್ನು ತೋರಿಸುವಂತಿದ್ದವು. ಮರದ ಎಲೆಗಳಿಂದ ತುಂಬಿರುವ ಕೋಟೆಯ ಮೇಲಿನ ಕಾಲುಹಾದಿಯಲ್ಲಿ ಸಿಗರೇಟಿನ ತುಂಡುಗಳು, ಕಸ ಎಸೆಯುವವರನ್ನು ನೋಡಿಯೂ ನೋಡದಂತಿರುವ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೋಡಿ ಮಧ್ಯಾಹ್ನದ ಬಿಸಿಲಿಗೆ ನನಗೂ ಒಮ್ಮೆ ಕೋಪ ನೆತ್ತಿಗೆ ಬಂದಿದ್ದು ಸುಳ್ಳಲ್ಲ. ಇಂಥ ಅಮೂಲ್ಯ ಕೋಟೆಯ ಸ್ವಚ್ಛತೆಯ ಬಗ್ಗೆ ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಿದ್ದರೆ ಚೆನ್ನಾಗಿತ್ತು ಅನ್ನಿಸಿತು.

ಗತವೈಭದ ಗುರುತು ಮತ್ತು ವರ್ತಮಾನದ ನಿರ್ಲಕ್ಷ್ಯ ಎರಡನ್ನೂ ಒಟ್ಟೊಟ್ಟಿಗೇ ಹೇಳುತ್ತಿದ್ದ ಕೋಟೆಯನ್ನು ಸುತ್ತಿ, ಬಿಸಿಲಿನ ಧಗೆಗೆ ಬೆಂದು ಹೊರಬಂದ ನನಗೆ ಕಾಣಿಸಿದ್ದು ಜ್ಯೂಸಿನ ಅಂಗಡಿ. ತಂಪಾದ ಲಿಂಬು ಶರಬತ್ ಕುಡಿದು, 'ಆಗಾ ಖಾನ್ ಪ್ಯಾಲೇಸ್' ಎಂಬ ಮತ್ತೊಂದು ಅರಮನೆ ನೋಡಲು ಹೊರಟೆ.

ಪ್ರತಿಕ್ರಿಯಿಸಿ: feedback@sudha.co.in